1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.5473/2012

ದಿಃ 21.09.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 8

ಚಾಸಾಃ 32

| | |
|---|---|
| ಹೆಸರು | ಃ ನವೀನ್.ಜಿ.ಎಸ್. |
| ತಂದೆಯ ಹೆಸರು | ಃ ಸುಗಂಧರಾಜಪ್ಪ |
| ವಯಸ್ಸು | ಃ 38 ವರ್ಷ |
| ಉದ್ಯೋಗ | ಃ ಇಂಜಿನಿಯರ್ |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಗಳು ಗೊತ್ತು, ಆರೋಪಿಗಳು ಮೈಸೂರು ನಗರದಲ್ಲಿ ರಾಯಲ್ ಕೌಂಟಿ ಎಂಬ ಲೇ ಔಟ್ ಮಾಡುತ್ತೇವೆಂದು ಪ್ರಕಟಿಸಿದ್ದು, ಅದರಂತೆ ಅಲ್ಲಿ ನಾನು ಒಂದು ನಿವೇಶನವನ್ನು ಖರೀದಿ ಮಾಡಲು ತೀರ್ಮಾನಿಸಿದ್ದೆವು. ಈ ಸಂಬಂಧವಾಗಿ ಸದರಿ ಸಂಸ್ಥೆಯವರು ಸದರಿ ನಿವೇಶನವನ್ನು ತೋರಿಸಿರುತ್ತಾರೆ. ಸದರಿ ನಿವೇಶನಕ್ಕೆ ಮಾರಾಟ ಬೆಲೆ ನಿಗಧಿ ಮಾಡಿ ಕರಾರು ಪತ್ರವನ್ನು ಮಾಡಿಸಿಕೊಳ್ಳಲು ಬರುವಂತೆ ನನಗೆ ತಿಳಿಸಿರುತ್ತಾರೆ. ಅದರಂತೆ ದಿಃ 27.01.2007 ರಂದು ನನಗೆ ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಕರಾರು ಪತ್ರದಂತೆ ಮುಂಗಡ ಹಣವಾಗಿ 1,80,000/- ರೂ ಹಣವನ್ನು ಸದರಿ ಸಂಸ್ಥೆಯವರಿಗೆ ಪಾವತಿ ಮಾಡಿದ್ದೇನೆ. ಸದರಿ ಹಣಕ್ಕೆ ಸಂಸ್ಥೆಯವರು ರಸೀದಿಯನ್ನು ಕೊಟ್ಟಿರುತ್ತಾರೆ. ಒಂದು ಪಕ್ಷ ನಿವೇಶನ ಬೇಡವಾದರೆ ಬಡ್ಡಿ ಸಹಿತ ಮುಂಗಡ ಹಣವನ್ನು ವಾಪಸ್ ಕೊಡುತ್ತೇವೆಂದು ತಿಳಿಸಿರುತ್ತಾರೆ. ಆ ನಂತರ ಒಂದು ವರ್ಷದ ನಂತರ ಸದರಿ ಸಂಸ್ಥೆಯ ಕಚೇರಿಗೆ ಭೇಟಿ ಕೊಡಲು ಹೋದಾಗ

ಅಲ್ಲಿ ಯಾರು ಇರಲಿಲ್ಲ, ಆದ್ದರಿಂದ ಸದರಿ ಸಂಸ್ಥೆಯವರು ನನಗೆ ಯಾವುದೇ ನಿವೇಶನವನ್ನಾಗಲೀ, ಕೊಟ್ಟಂತಹ ಹಣವನ್ನಾಗಲೀ ಕೊಟ್ಟಿರುವುದಿಲ್ಲ. ಈ ರೀತಿ ಸದರಿ ಸಂಸ್ಥೆಯವರು ನನಗೆ ಮೋಸ ಮಾಡಿರುತ್ತಾರೆ. ಆ ನಂತರ ಪೊಲೀಸ್ ಠಾಣೆಯಲ್ಲಿ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿದ್ದೇನೆ. ನನಗೆ ಹಾಗೂ ಸದರಿ ಸಂಸ್ಥೆಯವರಿಗೆ ಆದಂತಹ ಕರಾರು ಪತ್ರವನ್ನು ನಿಪಿ.19 ಎಂದು ಗುರುತಿಸಲಾಯಿತು. ರಸೀದಿಯನ್ನು ನಿಪಿ.20 ಎಂದು ಗುರುತಿಸಲಾಯಿತು. ನಾನು ಕೊಟ್ಟ ದೂರನ್ನು ನಿಪಿ.21 ಎಂದು, ಸಾಕ್ಷಿಯ ಸಹಿಯನ್ನು ನಿಪಿ.21(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೊಲೀಸ್‌ನವರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

ಪಾಟೀ ಸವಾಲುಃ 9, 5, 3, 7, 11, 12, 13, 16, 18, 17 ಹಾಗೂ 19ನೇ ಆರೋಪಿಗಳ ಪರ ಶ್ರೀ ಬಿಎಸ್ ವಕೀಲರಿಂದಃ-

ಮೇಲೆ ತಿಳಿಸಿದ ಸಂಸ್ಥೆಯ ಪರವಾಗಿ ನನಗೆ ಕರಾರು ಪತ್ರ ಬರೆದುಕೊಟ್ಟಂತಹ ವ್ಯಕ್ತಿಯ ಹೆಸರು ಈಗ ನನಗೆ ಜ್ಞಾಪಕ ಇಲ್ಲ. ಸದರಿ ಕರಾರು ಪತ್ರ ಆಗುವುದಕ್ಕೆ ಮುಂಚೆ ಸದರಿ ನಿವೇಶನವನ್ನು ನಾನು ನೋಡಿರುತ್ತೇನೆ. ಸದರಿ ನಿವೇಶನವನ್ನು ಚನ್ನಬಸಪ್ಪ ಎಂಬ ಏಜೆಂಟ್ ನನಗೆ ತೋರಿಸಿರುತ್ತಾರೆ. ಮೇಲೆ ತಿಳಿಸಿದ ಚನ್ನಬಸಪ್ಪ ಹಾಗೂ ಕರಾರು ಪತ್ರ ಬರೆದುಕೊಟ್ಟಂತಹ ವ್ಯಕ್ತಿಯನ್ನು ಹೊರತುಪಡಿಸಿ ಬೇರೆ ಯಾರು ಗೊತ್ತಿಲ್ಲ ಎಂದರೆ ಸರಿ.

ಪಾಟೀ ಸವಾಲುಃ 1 ಹಾಗೂ 2ನೇ ಆರೋಪಿಗಳ ಪರ ಶ್ರೀ ಬಿಎಸ್ ವಕೀಲರಿಂದಃ-

ಆರೋಪಿ ಬೆಂಗಳೂರಿನಲ್ಲಿರುವ ನಿವೇಶನವನ್ನು ಮಾರಾಟ ಮಾಡಲು ಒಪ್ಪಿಕೊಂಡಿದ್ದು, ಅದರ ಸಂಬಂಧವಾಗಿ ರೂ 10,63,000/- ರೂ ಹಣವನ್ನು ಪಡೆದುಕೊಂಡಿದ್ದು, ಬೆಂಗಳೂರಿನಲ್ಲಿ ನಿವೇಶನಗಳು ಇಲ್ಲದ ಕಾರಣ ಮೈಸೂರಿನಲ್ಲಿ ಸೈಟ್ ಕೊಡುವುದಾಗಿ ಹೇಳಿ ಅದೇ ಮೊತ್ತಕ್ಕೆ ರಸೀದಿ ಕೊಟ್ಟಿರುತ್ತಾರೆ. ಅಂದರೆ ಮೈಸೂರಿನಲ್ಲಿರುವ

ನಿವೇಶನ ಕೊಡಲು ಕಾರಣ ಬೆಂಗಳೂರಿನಲ್ಲಿ ನಿವೇಶನಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ. ಅಂದರೆ ಒಂದು ನಿವೇಶನಕ್ಕೆ ಹಣವನ್ನು ಕೊಟ್ಟಿರುತ್ತೇನೆ. ಸದರಿ ನಿವೇಶನವನ್ನು ನಾನು ನೋಡಿರುತ್ತೇನೆ. ಕರಾರು ಪತ್ರದಲ್ಲಿ ಲೇ ಔಟ್ ಪ್ಲ್ಯಾನ್ ಹಾಗೂ ಲೈಸೆನ್ಸ್ ಮಂಜೂರಾದ ನಂತರ ಆರು ತಿಂಗಳ ಒಳಗಾಗಿ ಬಾಕಿ ಹಣ ಕೊಟ್ಟು ರಿಜಿಸ್ಟರ್ ಮಾಡುವ ಕಂಡೀಶನ್ ಇದೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರದಲ್ಲಿ ನಿವೇಶನದ ಸಂಖ್ಯೆ ಹಾಗೂ ಚೆಕ್ಕುಬಂದಿಯನ್ನು ತಿಳಿಸಿಲ್ಲ ಎಂದರೆ ಸರಿ. ನನ್ನ ಎರಡು ನಿವೇಶನಗಳ ಪೈಕಿ ಒಂದು ಬೆಂಗಳೂರಿಗೆ ಸಂಬಂಧಪಟ್ಟಿದ್ದು, ಇನ್ನೊಂದು ಮೈಸೂರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ಸದರಿ ನಿವೇಶನಗಳ ಸಂಬಂಧ ಪರವಾನಗಿ ಸಂಬಂಧಪಟ್ಟ ಇಲಾಖೆಗಳಿಂದ ಬೇರ ಮಂಜೂರಾಗಿರಲಿಲ್ಲ ಎಂಬ ವಿಷಯ ನನಗೆ ಗೊತ್ತಿರಲಿಲ್ಲ. ನಾನು ಆರೋಪಿತರನ್ನು ಸದರಿ ಆಸ್ತಿಯನ್ನು ಬೇಗ ಅಭಿವೃದ್ಧಿಪಡಿಸಿ ನಿವೇಶನವನ್ನು ಕೊಡುವಂತೆ ಒತ್ತಾಯಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಸದರಿ ಪರವಾನಗಿ ತಡವಾಗಿದೆ, ಆದರೆ ನನ್ನಿಂದ ತಡವಾಗಿಲ್ಲ ಎಂದು ನನಗೆ ಸುಮಾರು ಬಾರಿ ಹೇಳಿದ್ದರು ಎಂದರೆ ಸರಿಯಲ್ಲ. ಮೇಲೆ ತಿಳಿಸಿದ ಕರಾರು ಹಾಗೂ ರಸೀದಿ ಆಧಾರದ ಮೇಲೆ ಜಿಲ್ಲಾ ಗ್ರಾಹಕರ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿದ್ದೇನೆಂದರೆ ಸರಿ. ಸದರಿ ನ್ಯಾಯಾಲಯ ಆಸ್ತಿಯನ್ನು ಮುಟ್ಟುಗೋಲು ಹಾಕುವಂತೆ ಆದೇಶ ಮಾಡಿದೆ ಎಂದರೆ ಸರಿ. ಸದರಿ ಪ್ರಕರಣ ಇನ್ನೂ ಚಾಲ್ತಿಯಲ್ಲಿದೆ ಎಂದರೆ ಸರಿ. ಆರೋಪಿಯ ವಿರುದ್ಧ ಸುಳ್ಳು ಆರೋಪ ಮಾಡಿ ಸುಳ್ಳು ದೂರನ್ನು ಕೊಟ್ಟಿದ್ದೇವೆಂದರೆ ಸರಿಯಲ್ಲ. ನಾವು ಕೊಟ್ಟ ದೂರಿನ ಆಧಾರದ ಮೇಲೆ ಪೊಲೀಸ್‌ನವರು ಆರೋಪಿಯ ಕಚೇರಿಯ ವಿರುದ್ಧ ಎಲ್ಲಾ ದಾಖಲೆಗಳನ್ನು ಅಮಾನತ್ತುಪಡಿಸಿಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಆರೋಪಿ ನಮಗೆ

ಮೋಸ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯವನ್ನು ನೀಡುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ